**CC 583-2025 PW 1 NI ACT.doc**

ಪಿ ಡಬ್ಲ್ಯೂ ಃ **1 -**

ಸಾಕ್ಷಿಗೆ ದಿನಾಂಕಃ **21.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು: ಆರೋಪಿತನ ಪರಃ ಶ್ರೀ .ಬಿ.ಆರ್. ವಕೀಲರ ಮೂಲಕ

ಚೆಕ್ ನೀಡಿದ ಬಗ್ಗೆ ಮತ್ತು ಅದರ ನಂಬರ್‌ನ್ನು ನಿಪಿ 3 ರಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನಗೆ 3 ಲಕ್ಷ ರೂಪಾಯಿಗಳನ್ನು ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಆಟೋ ಇರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಲು ತಯಾರಿರುತ್ತೇನೆ. ನನ್ನ ಬಳಿ ಆಟೋ ಇಲ್ಲ ಎಂದರೆ 02 ಆಟೋಗಳು ಇರುತ್ತವೆ. ನನ್ನ ಬಳಿ ಈಗ 15 ಆಡುಗಳು ಇರುತ್ತವೆ. ಆ ಬಗ್ಗೆ ದಾಖಲೆ ಇರುವುದಿಲ್ಲ. ನನಗೆ ಸೇರಿದ 20 ಗುಂಟೆ ಜಮೀನಿನಲ್ಲಿ ನೀಲಗಿರಿ ಬೆಳೆ ಇರುತ್ತದೆ. ಅದಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಬಳಿ ಆ ದಿನ 3 ಲಕ್ಷ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ, ಆದರೆ ಮನೆಯಲ್ಲಿ ಇತ್ತು. ಆ ದಿನ ಹಣ ಕೊಟ್ಟಿರುತ್ತೇನೆ ಎಂದು ಹೇಳುವ ಕಾಲಕ್ಕೆ ಬೇರೆಯವರ ಸಮಕ್ಷಮದಲ್ಲಿ ನೀಡಬಹುದಾಗಿತ್ತು ಎಂದರೆ ನಂಬಿಕೆಯ ಮೇಲೆ ಕೊಟ್ಟಿರುತ್ತೇನೆ. 3 ಲಕ್ಷ ರೂಪಾಯಿ ಕೊಟ್ಟ ಬಗ್ಗೆ ದಾಖಲೆಯನ್ನು ಬರೆಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ನಂಬಿಕೆಯ ಮೇಲೆ ಕೊಟ್ಟಿರುತ್ತೇನೆ. ನಾನು ಯಾವುದೇ ಹಣವನ್ನು ಆರೋಪಿಗೆ ಕೊಟ್ಟಿಲ್ಲದೇ ಇರುವ ಕಾರಣ ನಾನು ಯಾವುದೇ ದಾಖಲೆಯನ್ನು ಬರೆಸಿಕೊಂಡಿಲ್ಲ ಮತ್ತು ಬೇರೆಯವರ ಸಮಕ್ಷಮದಲ್ಲಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

2. ನಮ್ಮ ಮನೆಯಲ್ಲಿ ಈಗ ನಾನು ಒಬ್ಬನೇ ಇರುತ್ತೇನೆ. ನಾನು ಒಬ್ಬನೇ ಇರುವ ಕಾರಣ ನಾನು ಅಷ್ಟು ಮೊತ್ತವನ್ನು ದುಡಿದಿಲ್ಲ ಎಂದರೆ ಸರಿಯಲ್ಲ. ನಾನು ಬಡ್ಡಿಯ ವ್ಯವಹಾರವನ್ನು ಮಾಡುವುದಿಲ್ಲ. ಆಟೋವನ್ನು ಖರೀದಿ ಮಾಡಲು ಮತ್ತು ಕೈಸಾಲವನ್ನು ತೀರಿಸಲು ಆರೋಪಿಯು ನನ್ನಿಂದ ಸಾಲ ಪಡೆದಿರುತ್ತಾರೆ. ಆರೋಪಿಯು ಸಾಲದ ಮೊತ್ತವನ್ನು ಏನು ಮಾಡಿರುತ್ತಾರೆ ಎಂದು ನಾನು ವಿಚಾರಿಸಿರುವುದಿಲ್ಲ. ಆ ರೀತಿ ವಿಚಾರಿಸಲು ನನಗೆ ತೊಂದರೆ ಇರಲಿಲ್ಲ. ಆರೋಪಿಯು ಯಾರ ಬಳಿ ಸಾಲ ಪಡೆದಿದ್ದರು ಎಂದು ನಾನು ಅವರನ್ನು ಕೇಳಿರುವುದಿಲ್ಲ. ಆರೋಪಿಯು ಯಾರ ಬಳಿಯೂ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಬಳಿಯೂ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಆಟೋವನ್ನು ಖರೀದಿ ಮಾಡಿಲ್ಲ ಅವರ ಬಳಿ ಆಟೋ ಇಲ್ಲ ಮತ್ತು ಆಟೋವನ್ನು ಚಾಲನೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನಗೆ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

3. ಈಗ ನೋಡುತ್ತಿರುವ ನಿಪಿ 1 ಚೆಕ್‌ನ್ನು ಆರೋಪಿಯು ನನಗೆ ನೀಡಿರುತ್ತಾರೆ. ನಿಪಿ 1 ರಲ್ಲಿ ಬರಹಗಳು ಬೇರೆ ಬೇರೆ ರೀತಿಯಲ್ಲಿ ಇರುತ್ತವೆ ಎಂದರೆ ಸರಿಯಲ್ಲ. ನಿಪಿ 1 ನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 1 ನ್ನು ನಾನೇ ಬರೆಯಿಸಿ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಸಾಲ ಪಡೆದಿಲ್ಲ ಮತ್ತು ಅವರಿಗೆ ಸಾಲ ಪಡೆಯುವ ಅಗತ್ಯತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಬಿ.ಪಿ.ಎಲ್,. ಕಾರ್ಡ್ ಇದೆ ಎಂದರೆ ಸರಿ. ನನಗೆ ಪಂಚಾಯಿತಿಯಿಂದ ಜಾಬ್ ಕಾರ್ಡ್‌ನ್ನು ನೀಡಿರುತ್ತಾರೆ ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ಅತ್ಯಂತ ಕಡು ಬಡವರಿಗೆ ಬಿ.ಪಿ.ಎಲ್. ಕಾರ್ಡ್ ಮತ್ತು ಜಾಬ್ ಕಾರ್ಡ್‌ನ್ನು ನೀಡರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎಲ್ಲರೂ ತೆಗೆದುಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನಾನು ಹೆಚ್ಚು ಆದಾಯ ಹೊಂದಿರುವುದರಿಂದ ಸದರಿ ದಾಖಲೆಗಳನ್ನು ನಾನು ಪಡೆದಿರುವುದು ಅಪರಾಧ ಎಂದರೆ ಸರಿಯಲ್ಲ. ನಾನು ಸಾಲ ಕೊಡುವ ಸಾಮರ್ಥ್ಯವನ್ನು ಹೊಂದಿಲ್ಲ ಎಂದರೆ ಸರಿಯಲ್ಲ.

4. ಆರೋಪಿಗೆ ಸಂಬಂಧಿಸಿದ ಕೆಎ-11-ಇಸಿ-0304 ನಂಬರ್ ನ ಬೈಕ್ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ಸದರಿ ಬೈಕ್‌ನ್ನು ನಾನು ಆರೋಪಿಯಿಂದ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಆರೋಪಿಯು ಪೊಲೀಸ್ ಠಾಣೆಗೆ ದೂರು ನೀಡಿದರೆ ನನ್ನ ತಕರಾರು ಇರುವುದಿಲ್ಲ. ನಾನು ಆರೋಪಿಗೆ ಯಾವುದೇ ಹಣ ನೀಡದೇ ಅವರಿಗೆ ಸೇರಿದ ಬೈಕ್‌ನ್ನು ತೆಗೆದುಕೊಂಡು ಸುಳ್ಳು ದೂರನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ ಮಳವಳ್ಳಿ.